ವಿವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಾಯೋಗಿಕ ಪತ್ರಿಕೆ

# ವಿಜಯಿ weekly

ಸಂಪುಟ : 01 ಸಂಚಿಕೆ : 07 ದಿನಾಂಕ : ನವೆಂಬರ್ 12 – 18, 2016.

## ವಿವಿಧ ಸ್ಪರ್ಧೆಗಳ ವಿಜೇತರು

**ಬಳ್ಳಾರಿ, ನ. 12:** ವಿಶ್ವವಿದ್ಯಾಲಯದಲ್ಲಿ ಮೂರು ದಿನಗಳ ಕಾಲ ಭರದಿಂದ ನಡೆದ ಅಂತರ್ ವಿಭಾಗೀಯ ಸಾಂಸ್ಕೃತಿಕ ಸ್ಪರ್ಧೆಗಳ ಯುವಜನೋತ್ಸವದಲ್ಲಿ 20ಕ್ಕೂ ಹೆಚ್ಚು ಸ್ಪರ್ಧೆಗಳು ಯಶಸ್ವಿಯಾಗಿ ನಡೆದಿವೆ. ಸ್ಪರ್ಧೆಗಳಲ್ಲಿ ಪಾಲ್ಗೊಂಡು ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದ ವಿಜೇತರಿಗೆ ಸಮಾರೋಪ ಸಮಾರಂಭದಲ್ಲಿ ಬಹುಮಾನ, ಪ್ರಮಾಣ ಪತ್ರ ವಿತರಿಸಲಾಯಿತು. ಪ್ರಥಮ ಸ್ಥಾನ ಗಳಿಸಿದ ಸ್ಪರ್ಧಾಳುಗಳನ್ನು ಅಂತರ್ ಕಾಲೇಜು ಹಂತದಲ್ಲಿ ಭಾಗವಹಿಸುವ ಅವಕಾಶವನ್ನು ಪಡೆದಿರುತ್ತಾರೆ. ಸ್ಪರ್ಧಾವಾರು ವಿಜೇತರ ಪಟ್ಟಿ ಇಂತಿದೆ:

ರಂಗೋಲಿ– ಪ್ರಥಮ: ಕಾವ್ಯ (ಗಣಿತ ವಿಭಾಗ), ದ್ವಿತೀಯ: ಸೌಮ್ಯಶ್ರೀ (ಎಂ.ಕಾಂ); ಫೋಟೋಗ್ರಫಿ– ಪ್ರಥಮ: ವಿಶ್ವಸಾಗರ್ (ಅರ್ಥಶಾಸ್ತ್ರ), ದ್ವಿತೀಯ: ಮಲ್ಲಿಕಾರ್ಜುನ (ಎಂ.ಬಿ.ಎ.); ಕೋಲ್ಯಾಜ್– ಪ್ರಥಮ: ಬಾಲು (ಇಂಗ್ಲೀಷ್) ದ್ವಿತೀಯ: ಅಶೋಕ್ (ಸಮಾಜಶಾಸ್ತ್ರ); ಸ್ಪಾಟ್ ಪೇಟಿಂಗ್– ಪ್ರಥಮ: ಕೃಷ್ಣಪ್ಪ (ಕೊಪ್ಪಳ ಸ್ನಾ. ಕೇಂದ್ರ), ದ್ವಿತೀಯ: ವಿಷ್ಣುನಾಯ್ಕ (ಇತಿಹಾಸ); ಆಂಗ್ಲ ಚರ್ಚೆ– ಪ್ರಥಮ: ತಮೀನ ಬೇಗಂ (ಕಂಪ್ಯೂಟರ್ ಸೈನ್ಸ್), ದ್ವಿತೀಯ– ಫರ (ಇಂಗ್ಲೀಷ್).

ಕನ್ನಡ ಚರ್ಚೆ– ಪ್ರಥಮ: ಸುಮ (ಸಸ್ಯಶಾಸ್ತ್ರ), ದ್ವಿತೀಯ: ಸಾವಿತ್ರಿ (ಕೊಪ್ಪಳ); ಇಂಗ್ಲೀಷ್ ಭಾಷಣ– ಪ್ರಥಮ: ಸೈಫ್ ಆಫ್ರೀನಾ (ಸಸ್ಯಶಾಸ್ತ್ರ), ದ್ವಿತೀಯ– ತಮೀನ ಬೇಗಂ (ಕಂಪ್ಯೂಟರ್ ಸೈನ್ಸ್); ಕನ್ನಡ ಭಾಷಣ– ಪ್ರಥಮ: ನೀಲಪ್ಪ (ಕನ್ನಡ), ದ್ವಿತೀಯ: ವಿದ್ಯಾಶ್ರೀ (ಅರ್ಥಶಾಸ್ತ್ರ).

ವ್ಯಂಗ್ಯಚಿತ್ರ– ಪ್ರಥಮ: ಮನೋಹರ್ (ಅರ್ಥಶಾಸ್ತ್ರ), ದ್ವಿತೀಯ: ಸ್ವಾತಿ (ವಾಣಿಜ್ಯ); ವೆಸ್ಟರ್ನ್ ಸೋಲೋ–ಪ್ರಥಮ: ಬಾಲು ಕ್ರಿಸ್ಟೋಫರ್ (ಇಂಗ್ಲೀಷ್), ದ್ವಿತೀಯ: ಶೆಹನಾಜ್ ಬಾನು (ಎಂ.ಕಾಂ.); ವೆಸ್ಟರ್ನ್ ಗ್ರೂಪ್– ಪ್ರಥಮ: ಫರ ಮತ್ತು ತಂಡ (ಇಂಗ್ಲೀಷ್); ಜಾನಪದ ಗೀತೆ– ಪ್ರಥಮ: ಉದಯ್‌ಕುಮಾರ್ (ಇಂಗ್ಲೀಷ್), ದ್ವಿತೀಯ: ಮಂಜುನಾಥ (ಅರ್ಥಶಾಸ್ತ್ರ); ಚಲನಚಿತ್ರ ಗೀತೆ– ಪ್ರಥಮ: ನಾಗವೇಣಿ (ಇಂಗ್ಲೀಷ್), ದ್ವಿತೀಯ: ಪ್ರಭುರಾಜ್ (ಭೌತಶಾಸ್ತ್ರ); ಸಮೂಹ ಗಾಯನ– ಪ್ರಥಮ: ಮಂಜುನಾಥ ಮತ್ತು ತಂಡ (ಅರ್ಥಶಾಸ್ತ್ರ), ದ್ವಿತೀಯ – ಉದಯ್ ಕುಮಾರ್ ತಂಡ (ಇಂಗ್ಲೀಷ್).

(ಉಳಿಕೆ ವಿವರ ಮುಂದಿನ ಸಂಚಿಕೆಯಲ್ಲಿ)

## ಭಾಗವಹಿಸುವಿಕೆಯೇ ಮುಖ್ಯ, ಬಹುಮಾನವಲ್ಲ: ಮುಜುಂದಾರ್

**ಬಳ್ಳಾರಿ,ನ.12:** ಅವಕಾಶಗಳು ನಮಗಾಗಿ ಕಾದು ಕುಳಿತಿರುವುದಿಲ್ಲ, ಬಂದಿರುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವ ಜಾಣ್ಮೆ ಬೆಳೆಸಿಕೊಳ್ಳಬೇಕೆಂದು ವಿವಿಯ ಸಿಂಡಿಕೇಟ್ ಸದಸ್ಯೆ ಸಾವಿತ್ರಿ ಮುಜುಂದಾರ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.



**ಸಮಾರೋಪ ಸಮಾರಂಭದಲ್ಲಿ ವಿವಿಯ ಸಿಂಡಿಕೇಟ್ ಸದಸ್ಯರಾದ ಸಾವಿತ್ರಿ ಮುಜುಂದಾರ್ ಅವರಿಂದ ಪ್ರಶಸ್ತಿ ಸ್ವೀಕರಿಸುತ್ತಿರುವ ಸಸ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿ ಸೈಫ್ ಅಫ್ರೀನಾ.**

ಯುವಜನೋತ್ಸವದ ಅಂಗವಾಗಿ ವಿಶ್ರೀಕೃ ವಿಶ್ವವಿದ್ಯಾಲಯದ ವತಿಯಿಂದ ಹಮ್ಮಿಕೊಂಡಿದ್ದ ಅಂತರ್ ವಿಭಾಗೀಯ ಸಾಂಸ್ಕೃತಿಕ ಸ್ಪರ್ಧೆಗಳ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು. ಇಂತಹ ವೇದಿಕೆಗಳ ಮೂಲಕ ಪ್ರತಿಭಾ ಪ್ರದರ್ಶನ ಮುಖ್ಯವೇ ಹೊರತು ಪ್ರಶಸ್ತಿಯಲ್ಲ. ಆದರೆ ಇಂದಿನ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತಿದೆ. ಆತ್ಮವಿಶ್ವಾಸದಲ್ಲಿ ವಿಷಯದಲ್ಲಿ ವಿದ್ಯಾರ್ಥಿಗಳು ಜೇನು ನೊಣಗಳಂತೆ ಏಕೀಕೃತ ಶ್ರದ್ಧೆಯೊಂದಿಗೆ ಮುನ್ನಡೆಯಬೇಕು ಎಂದು ತಿಳಿಸಿದರು.

ವಿದ್ಯಾರ್ಥಿಗಳು ವೈಚಾರಿಕತೆ, ವೈಜ್ಞಾನಿಕತೆ ಮತ್ತು ಸಕರಾತ್ಮಕ ಮನೋಭಾವನೆಯನ್ನು ರೂಢಿಸಿಕೊಳ್ಳುವುದರ ಮುಖಾಂತರ ಸಂಶೋಧಕರಾಗಬೇಕು. ಆತ್ಮ ವಿಶ್ವಾಸದಲ್ಲಿ ವಿಜ್ಞಾನಿಗಳಂತೆ, ಆಶಾವಾದದಲ್ಲಿ ಬುದ್ಧ, ಬಸವರನ್ನು ಅನುಸರಿಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷರಾದ ಕುಲಸಚಿವ ಪ್ರೊ. ಟಿ.ಎಂ.ಭಾಸ್ಕರ್ ಮಾತನಾಡಿ, ಮೂರು ದಿನಗಳ ಕಾಲ ನಡೆದ ಸಾಂಸ್ಕೃತಿಕ ಸ್ಪರ್ಧಾಸಮಾರಂಭಗಳು ವಿವಿಯ ಎಲ್ಲಾ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸುವಲ್ಲಿ ಯಶಸ್ವಿಯಾಗಿವೆ. ವಿವಿಯೆಂಬ ಜ್ಞಾನಬೆಟ್ಟವನ್ನು ಯಾರು ಹತ್ತಲು ಹಂಬಲಿಸುತ್ತಾರೋ ಅವರು ಜೀವನದಲ್ಲಿ ಯಶಸ್ಸು ಪಡೆಯುತ್ತಾರೆ ಎಂಬ ಸ್ಫೂರ್ತಿಯುತ ನುಡಿಗಳನ್ನಾಡಿದರು. **–ಪದ್ಮಾ, ಲತಾ**

## ಪಾತ್ರ ವೈವಿಧ್ಯತೆ ಮೆರೆದ ಏಕಪಾತ್ರಾಭಿನಯ ಸ್ಪರ್ಧೆಗಳು

**ಬಳ್ಳಾರಿ, ನ. 11:** ಯುವ ಜನೋತ್ಸವದಲ್ಲಿ ವಿವಿಯ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿಗಳು ಸೇರಿದಂತೆ 7 ವಿದ್ಯಾರ್ಥಿಗಳು ಏಕ ಪಾತ್ರಾಭಿನಯದಲ್ಲಿ ಪಾಲ್ಗೊಂಡು ತಮ್ಮ ಪ್ರತಿಭೆ ಪ್ರದರ್ಶಿಸುವ ಜೊತೆಗೆ ಹತ್ತು ಹಲವು ಪಾತ್ರಗಳನ್ನು ಪ್ರೇಕ್ಷಕರ ಮುಂದಿರಿಸಿದರು.

ಸಾಂಸ್ಕೃತಿಕ ಸ್ಪರ್ಧೆಗಳ ಹಬ್ಬದ ಎರಡನೇ ದಿನವಾದ ಶುಕ್ರವಾರ ಹೊಸ ಸಭಾಂಗಣದಲ್ಲಿ ಏಕಪಾತ್ರಾಭಿನಯ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು. ಹತ್ತು ನಿಮಿಷಗಳ ಕಾಲಾವಕಾಶವನ್ನು ಹೊಂದಿದ್ದ ಈ ಸ್ಪರ್ಧೆಯಲ್ಲಿ ಸಮಾಜಕಾರ್ಯ ವಿಭಾಗದ ಡಿ. ಪ್ರದೀಪ ರಾಜನ ಪಾತ್ರದಲ್ಲಿ, ರಸಾಯನಶಾಸ್ತ್ರ ವಿಭಾಗದ ಗಿಡ್ಡಿರಪ್ಪ ರಕ್ತರಾತ್ರಿ ನಾಟಕದ ಶಕುನ ಪಾತ್ರದಲ್ಲಿ, ಮಂಜುನಾಥ ಆರ್. ಮದಕರಿನಾಯಕನ ಪಾತ್ರದಲ್ಲಿ ಇಂಗ್ಲೀಷ್ ವಿಭಾಗದ ಮಂಜುನಾಥ ದುಶ್ಯಾಸನ ಪಾತ್ರದಲ್ಲಿ, ಕನ್ನಡ ವಿಭಾಗದ ಹೇಮ ಆಧುನಿಕ ಅತ್ತೆ–ಸೊಸೆ ಪಾತ್ರದಲ್ಲಿ ಅಭಿನಯಿಸಿದರು.

ಗಿಡ್ಡಿರಪ್ಪ ಶಕುನಿ ಪಾತ್ರ ಡೈಲಾಗ್ ಮತ್ತು ಅಭಿನಯದ ಮೂಲಕ ಪಾತ್ರದೊಳಗೆ ಪ್ರವೇಶಿಸದಂತಿತ್ತು. ಮಂಜುನಾಥ ಬಯಲಾಟದ ವೇಷದ ಮೂಲಕ ದುಶ್ಯಾಸನನ ಪಾತ್ರದಲ್ಲಿ ಮಿಂಚಿದರು. ಮಂಜುನಾಥ ಆರ್. ಐತಿಹಾಸಿಕ ಚಿತ್ರದುರ್ಗ ಮದಕರಿ ನಾಯಕನ ಪಾತ್ರದಲ್ಲಿ ವೀರಾವೇಶದಿಂದ ಆಬಿನಯಿಸಿದರೆ, ಹೇಮ ಅವರು ಆಧುನಿಕ ಅತ್ತೆ–ಸೊಸೆ ಪಾತ್ರಕ್ಕೆ ಚಪ್ಪಾಳೆಯ ಸುರಿಮಳೆಯಾಯಿತು.

ಮಹಿಳಾ ದೌರ್ಜನ್ಯ ವಿಷಯದ ಪಾತ್ರ ಮಾಡಿದ ಸ್ಪರ್ಧಿ ವಿಷಯದ ಆಚೆ ತೆರಳಿದಾಗ ತೀರ್ಪುಗಾರರು ಗರಂ ಆದದ್ದು ಕಂಡುಬಂತು. ಹಾಗೆಯೇ ಹೆಚ್ಚಿನ ಏಕಪಾತ್ರಾಭಿನಯ ವಿಷಯಗಳು ರಿಯಾಲಿಟಿ ಶೋಗಳ ಪ್ರೇರಿತ ಎಂಬ ಅಭಿಪ್ರಾಯವೂ ಪ್ರೇಕ್ಷಕರ ನಡುವೆ ಹರಿದಾಡಿತು. ಬಳ್ಳಾರಿಯ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಶಿವಶಂಕರ್ ನಾಯ್ಡು, ರಂಗಸಿರಿ ನಾಟಕ ಅಕಾಡೆಮಿ ಕಲಾವಿದ ರಘುರಾಂ ತೀರ್ಪುಗಾರರಾಗಿ ಆಗಮಿಸಿದ್ದರು. **–ಲತಾ**

## ಮನಸೂರೆಗೊಂಡ ಗೀತಗಾಯನ

**ಬಳ್ಳಾರಿ, ನ.೧೧:** ವಿಶ್ವವಿದ್ಯಾಲಯವು ಆರಂಭಿಸಿದ್ದ 3 ದಿನಗಳ ಅಂತರ್ ವಿಭಾಗೀಯ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಹಳೆಯ ಸಭಾಂಗಣದ ವೇದಿಕೆಯಲ್ಲಿ ಏರ್ಪಡಿಸಿದ್ದ ಜಾನಪದ ಗೀತೆ, ಭಾವಗೀತೆ, ಸಮೂಹ ಗೀತೆ ಮತ್ತು ಚಲನಚಿತ್ರ ಗೀತೆ ಸ್ಪರ್ಧೆಗಳು ತುಂಬಾ ಸೊಗಸಾಗಿ ಮೂಡಿಬಂದವು.



ವಿವಿಯ ಕ್ಯಾಂಪಸ್ ವಿದ್ಯಾರ್ಥಿಗಳು ಸೇರಿದಂತೆ ಕೊಪ್ಪಳ ಮತ್ತು ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಜಾನಪದ ಗೀತೆ ಸ್ಪರ್ಧೆಯಲ್ಲಿ ಕನ್ನಡ, ಇಂಗ್ಲೀಷ್, ಎಂ.ಬಿಎ ಸೇರಿದಂತೆ ವಿವಿಧ ವಿಭಾಗಗಳ ಒಟ್ಟು 19 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಯಾಕೆ ಬಡಿದಾಡ್ತಿ ತಮ್ಮ, ಊರ ಮುಂದಿನ ಬಾವಿ ಯಾರ ತೊಡಿದರೇನು, ಕಾಲುಗೆಜ್ಜೆ ಗಲಕ್ಕ ಕೈ ಬಳೆ ಝುಣಕ್ಕ, ಭಾರತ ದೇಶದ ನಾರಿ ಎಲ್ಲೋಯಿತು ನ್ನಾ ಸ್ಯಾರಿ ಎಂಬ ಗೀತೆಗಳನ್ನು 3 ನಿಮಿಷಗಳಲ್ಲೆ ಹಾಡುವ ಮೂಲಕ ಪ್ರೇಕ್ಷಕರ ಗಮನ ಸೆಳದರು.

ಮದ್ಯಾಹ್ನ 2.30ಕ್ಕೆ ಆರಂಭವಾದ ಭಾವಗೀತೆ ಸ್ಪರ್ಧೆಯು ಪ್ರೇಕ್ಷಕರನ್ನು ನಿಜವಾಗಿಯೂ ಭಾವಯಾನಲ್ಲಿ ಮಿಂದೇಳಿಸಿದ್ದು ಸುಳ್ಳಲ್ಲ. ಒಟ್ಟು 28 ವಿವಿಧ ವಿಭಾಗಗಳ ಸ್ಪರ್ಧಾಳುಗಳು ಭಾಗವಹಿಸಿದ್ದರು. ಅಮ್ಮ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲ ಅಮ್ಮ, ಕಾಣದ ಕಡಲಿಗೆ ಹಂಬಲಿಸಿದೆ ಮನ, ಅಮ್ಮ ನ್ನಾ ಎದೆಯಾಳದಲ್ಲಿ ಗಾಳಕ್ಕೆ ಸಿಕ್ಕ ಮೀನು, ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣು ಗಳ ಗುಡಿಯೊಳಗೆ, ಅಮ್ಮ ಎಂಬ ಮಾತಿಗಿಂತ ಬೇರೆ ಮಂತ್ರ ಎಲ್ಲಿದೆ ಹಾಡುಗಳ ಮೂಲಕ ಭಾವನ ಲೋಕಕ್ಕೆ ಕರೆದೊಯ್ಯದ್ದರು.

ಕಾರ್ಯಕ್ರಮದ ತೀರ್ಪುಗಾರರಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಧ್ಯಪಕ ಕಾಸಿಂ ಸಾಹೇಬ್, ಬಳ್ಳಾರಿಯ ಯರಿಗೌಡ, ಸಂಗೀತ ಕಲಾವಿದ ರಾಘವೇಂದ್ರ ಗುಡದೂರು, ವಿವಿಯ ಡಾ.ಶಕೀಲ ಆಗಮಿಸಿದ್ದರು.

ಸಮೂಹ ಗೀತೆ ಕಾರ್ಯಕ್ರಮದಲ್ಲಿ 10 ತಂಡಗಳು ಭಾಗವಹಿಸಿದ್ದವು. ಝುಣ ಝುಣ ಕಾಂಚನದಲ್ಲಿ, ಚೆಲುವಯ್ಯ ಚೆಲುವೋ ತಾನ ತಂದಾನ, ಗಲ್ಲುಗಲ್ಲೆನುತಾ ಗೆಜ್ಜೆ, ಇದು ಪುಣ್ಯ ಭರತ ಭೂಮಿ ಹಾಡುಗಳು ಮೂಡಿಬಂದವು. ಮಂಜುನಾಥ ತಂಡದ ಹಚ್ಚೇವು ಕನ್ನಡ ದೀಪ ಹಾಡು ಪ್ರೇಕ್ಷಕರ ಗಮನ ಸೆಳೆಯಿತು. ಚಲನಚಿತ್ರ ಕಾರ್ಯಕ್ರಮದಲ್ಲಿ 20 ತಂಡಗಳು ಭಾಗವಹಿಸಿದ್ದವು. ಅಖಿಲಂ ಭುವನಂ ಗಗನಂ ಶರಣಂ, ಒಂದು ಸುಳ್ಳಾದರೂ ನುಡಿ ಹೆಣ್ಣೆ, ಕೋಟಿ ಪಲ್ಲವಿ ಹಾಡಿದ ಕನಸು ಇದು, ನಟ ಸಾರ್ವಭೌಮ ಡಾ.ರಾಜ್ ಕುಮಾರ್ ಅವರ ಕವಿರತ್ನ ಕಾಳಿದಾಸ ಚಿತ್ರದ ಬೆಳ್ಳಿಮೂಡಿತೊ, ಕೋಳಿ ಕೂಗಿತೋ ಸೇರಿದಂತೆ ಇತರ ಹಾಡುಗಳ ಮೂಲಕ ನೆರೆದವರ ಮನರಂಜಿಸಿದರು. ಪ್ರೇಕ್ಷಕರು ಒಂದೊಂದು ಹಾಡು ಬಂದಾಗಲೂ ಜೋರಾದ ಚಪ್ಪಾಳೆ ಮೂಲಕ ಸ್ಪರ್ಧಾಳುಗಳನ್ನು ಹುರಿದುಂಬಿಸಿದರು. **– ಪದ್ಮಾವತಿ**

## ಪ್ರೇಕ್ಷಕರಿಲ್ಲದೇ ಸೊರಗಿದ ರಂಗೋಲಿ

ಬಳ್ಳಾರಿ, ನ.11: ವಿವಿಯ ಪರೀಕ್ಷಾಂಗ ಕಟ್ಟಡದ ಕೆಳಭಾಗದಲ್ಲಿರುವ 4ನೇ ವೇದಿಕೆಯಲ್ಲಿ ರಂಗೋಲಿ ಮತ್ತು ಕ್ಲೈಮಾಡಲಿಂಗ್ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.



ರಂಗೋಲಿ ಸ್ಪರ್ಧೆಯಲ್ಲಿ 15 ಸ್ಪರ್ಧಾಳುಗಳು ಭಾಗವಹಿಸಿದ್ದು, ಬಣ್ಣ–ಬಣ್ಣದ ರಂಗೋಲಿಯ ಚಿತ್ತಾರ ಮೂಡಿಸಿದ್ದರು. ರಂಗೋಲಿ ಸ್ಪರ್ಧೆಯಲ್ಲಿ ವಿದ್ಯಾರ್ಥಿನಿಯರು ಮಾತ್ರವಲ್ಲದೆ ಒಬ್ಬ ವಿದ್ಯಾರ್ಥಿಯು ಭಾಗವಹಿಸಿದ್ದು ವಿಶೇಷವಾಗಿತ್ತು.

ಇಲ್ಲಿಯೇ ಏರ್ಪಡಿಸಲಾಗಿದ್ದ ಕ್ಲೈ ಮಾಡಲಿಂಗ್ ಸ್ಪರ್ಧೆಯಲ್ಲಿ 6 ವಿದ್ಯಾರ್ಥಿಗಳು ಭಾಗವಹಿಸಿದ್ದರು. ರೈತರ ಉಪಕರಣಗಳಾದ ಎತ್ತು, ರಂಟೆ, ಮರ, ಎತ್ತಿನಗಾಡಿ ಸೇರಿದಂತೆ ಹಲವು ಆಕೃತಿಗಳನ್ನು ತಯಾರು ಮಾಡಿದ್ದರು. ಆದರೆ ಇಲ್ಲಿನ ವೇದಿಕೆ ಮತ್ತು ಸ್ಪರ್ಧೆಗಳ ಮಾಹಿತಿ ಮಾರ್ಗದರ್ಶನದ ಕೊರತೆಯಿಂದಾಗಿ ಪ್ರೇಕ್ಷಕರೇ ಇಲ್ಲದೇ ಬಿಕೋ ಅನ್ನಿಸುವ ವಾತಾವರಣ ಇಲ್ಲಿ ಸೃಷ್ಟಿಯಾಗಿತ್ತು. **– ಗುರುಬಸವರಾಜ್ ಉಳ್ಳಾಗಡಿ**

**ವಿದ್ಯಾರ್ಥಿ ಸಂಪಾದಕರು:** ಪದ್ಮಾವತಿ, ಲತಾ ವಿ, ಗುರುಬಸವರಾಜ್ ಉಳ್ಳಾಗಡ್ಡಿ.

**ಮಾರ್ಗದರ್ಶಕರು :** ವಿನಯ್ ಜಿ. ಪಿ.